# ಜನಮೆಚ್ಚಿದ ಶಿಕ್ಷಕನ ದಾಂಪತ್ಯ ಬೆಳ್ಳಿಹಬ್ಬಕ್ಕೆ ಜನಮನ ವಂದನೆ

ಪಡುಬಿದ್ರಿ ಗಣಪತಿ ಪ್ರೌಢಶಾಲೆಯಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿ ಮುಖ್ಯೋಪಾಧ್ಯಾಯರಾಗಿ ನಿವೃತ್ತರಾದ, ವಿದ್ಯಾರ್ಥಿಗಳ ಏಳಿಗೆಗೆ ಸಲ್ಲಿಸಿದ ಸೇವೆಗಾಗಿ ಜನಮೆಚ್ಚಿದ ಶಿಕ್ಷಕ ಪ್ರಶಸ್ತಿಗೆ ಪಾತ್ರರಾದ ಶ್ರೀ ಅನಂತ ಪಟ್ಟಾಭಿರಾವ್ ಮತ್ತು ಶ್ರೀಮತಿ ಪ್ರಸನ್ನ ಕುಮಾರಿಯವರ ವೈವಾಹಿಕ ಬೆಳ್ಳಿಹಬ್ಬದ ಸಮಾರಂಭವು ಕಾರ್ಕಳ ತಾಲೂಕು ಎರ್ಲಪಾಡಿ ಗ್ರಾಮದ ಕರ್ವಾಲು ಶ್ರೀ ಮಹಾವಿಷ್ಣು ಮೂರ್ತಿ ದೇವಾಲಯದ ಬಳಿ ಇರುವ ಅವರ ಮನೆ ಅನಂತ ಪದ್ಮನಾಭ ನಿಲಯದಲ್ಲಿ ನೆರವೇರಿತು. ಹೆತ್ತವರು, ಮಕ್ಕಳು, ಬಂಧು-ಬಾಂಧವರ ಜತೆ ತನ್ನ ಹಳೆವಿದ್ಯಾರ್ಥಿಗಳು ಹಾಗೂ ಊರವನ್ನು ಒಂದುಗೂಡಿಸಿಕೊಂಡು ಅನಂತಪಟ್ಟಾಭಿರಾಯರು ಬೆಳ್ಳಿಹಬ್ಬವನ್ನು ಆಚರಿಸಿದರು. ಬೆಳಿಗ್ಗೆ ಗಣಹೋಮದೊಂದಿಗೆ ಆರಂಭವಾದ ಸಮಾರಂಭ ಸತ್ಯನಾರಾಯಣ ಪೂಜೆ, ರಾತ್ರಿ ದುರ್ಗಾನಮಸ್ಕಾರ ಪೂಜೆ, ದೇವಾಲಯದಲ್ಲಿ ಹೂವಿನ ಪೂಜೆಗಳೊಂದಿಗೆ ನಡೆದು ಮಧ್ಯಾಹ್ನ ಮತ್ತು ರಾತ್ರಿ ನಡೆದ ಭೋಜನ ಕೂಟದಲ್ಲಿ ಬಂಧು-ಬಾಂಧವರು, ಶಿಷ್ಯವರ್ಗ ಹಾಗೂ ಹಿತೈಷಿಗಳು ಪಾಲ್ಗೊಂಡು ದಂಪತಿಗಳಿಗೆ ಶುಭ ಹಾರೈಸಿದರು.

ಗುರು ದಂಪತಿಗಳ ವಿವಾಹದ ರಜತ ದಿನವನ್ನು ಶಿಷ್ಯವೃಂದ ವಿಶಿಷ್ಟವಾಗಿ ಆಚರಿಸಿದರು. ಅದಕ್ಕಾಗಿ ರಾತ್ರಿ 8-30ಗಂಟೆಗೆ ಸಮೀಪದ ಶ್ರೀ ಅನಂತಮತಿ ಹಿರಿಯ ಪ್ರಾಥಮಿಕ ಶಾಲೆಯ ರಂಗಮಂಟಪದಲ್ಲಿ ವಿಶೇಷ ಸಮಾರಂಭವನ್ನು ಏರ್ಪಡಿಸಿ ಬೆಳ್ಳಿ ದಂಪತಿಗಳಿಂದ ಪರಸ್ಪರ ಹಾರ ವಿನಿಮಯ ಮಾಡಿಸಿ ಖುಷಿ ಪಟ್ಟರು. ಆಗಲೇ ಹುಟ್ಟೂರ ಸನ್ಮಾನವೂ ನಡೆಯಿತು. 'ಉದಯವಾಣಿ' ದೈನಿಕದ ಮಂಗಳೂರು ನ್ಯೂಸ್ ಬ್ಯುರೋ ಚೀಫ್ ಮನೋಹರ ಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಅನಂತಮತಿ ಶಾಲಾ ಸಂಚಾಲಕ ಹೆಕ್ಕಡ ಯುವರಾಜ ನಾಯ್ಕ್ ಶಾಲಾ ಮುಖ್ಯೋಪಾಧ್ಯಾಯ ಪ್ರಕಾಶ್ ಜೈನ್, ಯರ್ಲಪಾಡಿ ಗ್ರಾಮ ಪಂಚಾಯತ್‌ನ ಮಾಜಿ ಅಧ್ಯಕ್ಷ ಉದಯ ಹೆಗ್ಡೆ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ಮನೋಹರ ಪ್ರಸಾದರು ತಾನು ಕಲಿತಿದ್ದ ಅನಂತಮತಿ ಶಾಲೆಯ ಅಂಗನವಾಡಿ ಕೇಂದ್ರದ ಮೂಲ ಸೌಕರ್ಯ ಅಭಿವೃದಿಗಾಗಿ ರೂ. 5,000/ ಧನ ಸಹಾಯವನ್ನು ನೀಡಿದರು. ಪೈ ಸುಧೀರ್ ಕುಮಾರ್ ಪ್ರಸ್ತಾವನಾ ಭಾಷಣ ಮಾಡಿದರೆ ಶ್ರೀಮತಿ ಕಸ್ತೂರಿ ರಾಮಚಂದ್ರ ಸ್ವಾಗತಿಸಿದರು. ಪ್ರಕಾಶ್ ದೇವಾಡಿಗ ಅಭಿನಂದಿಸಿದರು. ರಾಜೇಶ್ ಶೇರಿಗಾರ್ ಕಾರ್ಯಕ್ರಮ ನಿರ್ವಹಿಸಿ ವಂದಿಸಿದರು.

ಸಭಾ ಕೂಟದ ಬಳಿಕ ಅನಂತಮತಿ ಶಾಲಾ ಪುಟಾಣಿಗಳಿಂದ ನೃತ್ಯ ವೈವಿಧ್ಯ, ಬೆಂಗಳೂರಿನ ಕುಮಾರಿ ಮಂಜುಶ್ರೀಯವರಿಂದ ಭರತನಾಟ್ಯ, ಗಣಪತಿ ಶಾಲಾ ವಿದ್ಯಾರ್ಥಿನಿಯರಿಂದ ವಿವಿಧ ಮನೋರಂಜನೆಗಳು ಜನರನ್ನು ರಂಜಿಸಿದರೆ ಹಳೆವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದ ಹರೀಶ್ ಕುಮಾರ್ ಪಡುಬಿದ್ರಿ ರಚಿಸಿ ಶಶಿಧರ ಗುಜರಾನ್ ಸಂಯೋಜಿಸಿದ ''ಬೈರಾಸ್ ಭಾಸ್ಕರೆ'' ಎಂಬ ತುಳು ನಾಟಕವು ನೆರೆದಿದ್ದ ಕಲಾಭಿಮಾನಿಗಳ ಮನಗೆದ್ದಿತು. ಕಾರ್ಯಕ್ರಮದ ಕೊನೆಯಲ್ಲಿ ಅನಂತಪಟ್ಟಾಭಿರಾಯರು ಎಲ್ಲಾ ಹಳೆ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಹರಸಿದರು.



ಶ್ರೀಶಾರದಾ ದೇವಸ್ಥಾನದಲ್ಲಿ
ತಾ.14-06-2008ರ ಶನಿವಾರ
ಸಂಜೆ ಗಂಟೆ 5-30ರಿಂದ
**ಗಮಕವಾಚನ-ಪ್ರವಚನ**
ಕಾರ್ಯಕ್ರಮವು ನಡೆಯಲಿದೆ.
ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**
ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನ'ಕಾರ **ಶ್ರೀ ಬಾರ್ಕೂರು ನಾಗೇಶರಾವ್.**
ಸರ್ವರಿಗೂ ಆದರದ ಸ್ವಾಗತ
**- ಶ್ರೀಶಾರದಾ ದೇವಸ್ಥಾನ ವೇದಿಕೆ**

**ಸಾಮೂಹಿಕ ಗಣಹೋಮ**
ಶ್ರೀಶಾರದಾ ದೇವಸ್ಥಾನದಲ್ಲಿ
ಪ್ರತಿ ತಿಂಗಳು
**ಸಂಕಷ್ಟಹರ ಚತುರ್ಥಿಯಂದು**
ನಡೆಯುತಿರುವ
**ಸಾಮೂಹಿಕ ಗಣೆಹೋಮವು**
ತಾ.23-05-2008ರಂದು ಮತ್ತು
ಜೂನ್ ತಿಂಗಳಲ್ಲಿ
22-06-2008ರಂದು ನಡೆಯಲಿದೆ.
**ಗಣಹೋಮ ಸೇವಾ ಶುಲ್ಕ ರೂ.51/-**
ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.
**- ಶ್ರೀಶಾರದಾ ದೇವಸ್ಥಾನ ವೇದಿಕೆ**


## ದೇವಿಕೃಪಾ ಏಜೆನ್ಸೀಸ್, ನಂದಿಕೂರು

**ಫೋನ್ : 2556536 (R), 2555466 (0)**

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ಸದಾಶಯ

ಸ್ಥಾನಿಕ ಬ್ರಾಹ್ಮಣ ವಧೂ-ವರರ ಮಾಹಿತಿ ಕೇಂದ್ರ
ಚಿಟ್ಪಾಡಿ, ಉಡುಪಿ.

**: ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ :**
**ಎಂ. ಸದಾನಂದರಾವ್ ಮತ್ತು ಎಂ. ಸಂತೋಷರಾವ್, ಚಿಟ್ಪಾಡಿ, ಉಡುಪಿ**
Ph : 2522638, 2523394


# ಹೇರಂಜೆಯಲ್ಲಿ ಅರಳಿದ ಸಂಸ್ಕೃತಿ ಕುಸುಮ



ಭಾಗವತ, ಗಮಕಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ನೀಲಾವರ ಲಕ್ಷ್ಮೀನಾರಾಯಣರಾವ್ ಹೇರಂಜೆ ಇವರ ಸಹಸ್ರಚಂದ್ರ ದರ್ಶನ ಶಾಂತಿಯು ಕುಟುಂಬಿಕರು, ಬಂಧು-ಮಿತ್ರರು ಹಾಗೂ ಅಭಿಮಾನಿಗಳ ಸಂದೋಹದೊಂದಿಗೆ ದಿನಾಂಕ 04-04-2008 ರಂದು ವೈವಿಧ್ಯಮಯ ಕಾರ್ಯಕ್ರಮಗಳಿಂದ ಸ್ಮರಣೀಯವಾಗಿ ಸಂಪನ್ನಗೊಂಡಿತು. ಪೂರ್ವಾಹ್ನ ಶ್ರೀ ಮಹಾಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆದುವು. ವನಿತೆಯರಿಂದ ಲಕ್ಷ್ಮೀಶೋಭಾನೆ ಮತ್ತು ಭಜನೆಯ ಅನಂತರ ಭೋಜನ ನಡೆಯಿತು.

ಅಪರಾಹ್ನ ಹಿರಿಯ ಪತ್ರಕರ್ತ ಮತ್ತು ಕಲಾವಿಮರ್ಶಕ ಶ್ರೀ ಈಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ಜರಗಿ ಹಿರಿಯ ಸಂಗೀತ ವಿದ್ವಾನ್ ಶ್ರೀ ಸೂರಾಲು ಪರಮೇಶ್ವರಯ್ಯ, ಶ್ರೀಮತಿ ಸುಪ್ರಭಾ ಆಚಾರ್ಯ (ಸಂಗೀತ ಭಜನೆ), ಹಿರಿಯ ಭಜಕರಾದ ಶ್ರೀ ಸುಬ್ರಹ್ಮಣ್ಯ ಹೆಬ್ಬಾರ್, ಸಾಹಿತಿ ಎ. ಎ. ರಾವ್ ಆರೂರು, ಯಕ್ಷಗಾನ ಹಿರಿಯ ಹೆಸರಾಂತ ಕಲಾವಿದ ಶ್ರೀ ಕೋಳ್ಯೂರು ರಾಮಚಂದ್ರರಾವ್, ಸಾಲಿಗ್ರಾಮ ಮಕ್ಕಳ ಮೇಳದ ಸಂಚಾಲಕ, ಭಾಗವತ ಶ್ರೀ ಎಚ್. ಶ್ರೀಧರ ಹಂದೆ, ಉಡುಪಿಯ ಯಕ್ಷಗಾನ ಕೇಂದ್ರದ ಪ್ರಾಂಶುಪಾಲರಾದ ಶ್ರೀ ಬಿ. ಸಂಜೀವ ಸುವರ್ಣ, ಯಕ್ಷಗಾನವನ್ನೇ ಉಸಿರಾಗಿಸಿಕೊಂಡ ಮುಕಾಂಬಿಕಾ ವಾರಂಬಳ್ಳಿ, ಕಲಾರಂಗದ ಶ್ರೀ ಮುರಳಿ ಕಡೆಕಾರ್, ಹರಿದಾಸ, ನಿವೃತ್ತ ಉಪನ್ಯಾಸಕ ಮ.ನಾ. ಹೆಬ್ಬಾರ್‌ರನ್ನು ಶಾಲು ಹೊದಿಸಿ, ಫಲಪುಷ್ಪ ನೀಡಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಮತ್ತು ಬಂಧು-ಮಿತ್ರ-ಅಭಿಮಾನಿಗಳ ಪರವಾಗಿ ಸಂಘದ ಅಧ್ಯಕ್ಷರಾದ ಶ್ರೀ ಸಿ. ಎಸ್. ರಾವ್‌ರವರು ಶ್ರೀ ಲಕ್ಷ್ಮೀ ನಾರಾಯಣರಾಯರನ್ನು ಶಾಲು ಹೊದಿಸಿ, ಫಲ-ಪುಷ್ಪ ನೀಡಿ ಅಭಿನಂದನಾ ಪತ್ರ ಅರ್ಪಿಸಿ ಗೌರವಿಸಿದರು. ಈ ಅಭಿನಂದನಾ ಪತ್ರ ಪದ್ಯರೂಪದಲ್ಲಿದ್ದು ವಿಶೇಷವಾಗಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕುಂದಾಪುರದ ಪ್ರಸಿದ್ಧ ವಕೀಲರಾದ ಶ್ರೀ ಎ. ಎಸ್. ಎನ್. ಹೆಬ್ಬಾರರು ತಮ್ಮ ಭಾಷಣದಲ್ಲಿ ಹಾಸ್ಯದ ಲಾಸ್ಯವನ್ನು ಸೂಸಿ ರಂಜಿಸಿದರು. ಇನ್ನೊರ್ವ ಮುಖ್ಯ ಅತಿಥಿ ಪ್ರವಚನಕಾರ, ಯಕ್ಷಗಾನ ಕಲಾವಿದ ಸಾಂತೂರು ಸದಾಶಿವರಾವ್ ಸಹಸ್ರಚಂದ್ರ ದರ್ಶನದ ವಿಶೇಷತೆ ತಿಳಿಸಿದರು. ಸನ್ಮಾನಿತರೆಲ್ಲರೂ ಸಂದರ್ಭೋಚಿತವಾಗಿ ಮಾತನಾಡಿದರು. ಅಧ್ಯಕ್ಷರು, ಶ್ರೀ ಶ್ರೀಧರ ಹಂದೆ, ಅಂಬಾತನಯ ಮುದ್ರಾಡಿಯವರು ಸ್ವರಚಿತ ಕವನಗಳಿಂದ ಸಭೆಗೆ ಸಾಹಿತ್ಯದ ಮೆರುಗನ್ನು ನೀಡಿದರು. ಅಧ್ಯಕ್ಷರು ಕಾರ್ಯಕ್ರಮಗಳನ್ನೆಲ್ಲಾ ವಿಮರ್ಶಿಸಿ ಇಂದು ಇಲ್ಲಿ ಸರ್ವಕಲಾ ಸಮ್ಮೇಳನ ನಡೆದಿದೆ ಎಂದು ತಮ್ಮ ಮೆಚ್ಚುಗೆ ವ್ಯಕ್ತ ಪಡಿಸದರು.

ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಉಡುಪಿಯ ಕಾರ್ಯದರ್ಶಿ ಶ್ರೀ ಭುವನೇಂದ್ರರಾವ್, ಉಪಾಧ್ಯಕ್ಷ ಎಸ್. ಎಂ. ರಾವ್ ಮತ್ತು ಶ್ರೀ ಕೃಷ್ಣಮೂರ್ತಿರಾವ್, ಶ್ರೀ ಶಾರದಾ ಪತ್ರಿಕೆಯ ಸಂಪಾದಕರಾದ ಶ್ರೀ ವೈ. ಮೋಹನ್‌ರಾವ್, ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಎಂ. ಸದಾನಂದರಾವ್ ಮೊದಲಾದವರು ಉಪಸ್ಥಿತರಿದ್ದರು.

ಆಕಾಶವಾಣಿ ಕಲಾವಿದ ಶ್ರೀ ಚಂದ್ರಶೇಖರ ಕೆದ್ಲಾಯರು ಪ್ರಾರ್ಥನೆ ಮಾಡಿದರು. ಮ.ನಾ. ಹೆಬ್ಬಾರ್ ಸ್ವಾಗತಿಸಿದರು. ಶ್ರೀ ಬಿ. ನಾಗೇಶ್ ರಾವ್ ಕಾರ್ಯಕ್ರಮ ನಿರ್ವಹಣೆ ನಡೆಸಿ ವಂದಿಸಿದರು.

ಅನಂತರ ಶ್ರೀ ಯಜ್ಞೇಶ್, ಅಧ್ಯಾಪಕರು, ಸುರತ್ಕಲ್ ಮತ್ತು ಪ್ರೊ। ನಾರಾಯಣ ಎಂ. ಹೆಗಡೆಯವರಿಂದ 'ಸುದರ್ಶನ ದರ್ಶನ' ಗಮಕ ವಾಚನ ಪ್ರವಚನ ನಡೆಯಿತು. ಶ್ರೀ ಚಂದ್ರಶೇಖರ ಕೆದ್ಲಾಯರು ಮತ್ತು ಬಳಗದವರಿಂದ 'ಸುಗಮ ಸಂಗೀತ', ಭಾಗವತರುಗಳಾದ ಶ್ರೀ ಜಿ. ಸದಾನಂದ ಐತಾಳ, ಶ್ರೀ ವಿದ್ವಾನ್ ಗಣಪತಿಭಟ್ ಮತ್ತು ಶ್ರೀ ಸುಬ್ರಹ್ಮಣ್ಯ ಆಚಾರ್‌ರಿಂದ ಯಕ್ಷಗಾನ ವೈಭವ ಕಾರ್ಯಕ್ರಮ ನಡೆಯಿತು. ಶ್ರೀ ಎ. ಪಿ. ಫಾಟಕ್ ಮದ್ದಳೆ ಮತ್ತು ಶ್ರೀ ಶಿವಾನಂದ ಕೋಟ ಚೆಂಡೆ ನುಡಿಸಿದರು. ಬಳಿಕ 'ಕರ್ಣಭೇದನ' ತಾಳಮದ್ದಳೆ ಕಾರ್ಯಕ್ರಮ ಜರಗಿತು. ಕರ್ಣನಾಗಿ - ಹರಿದಾಸ, ಸಾಹಿತಿ ಅಂಬಾತನಯ ಮುದ್ರಾಡಿ, ಶ್ರೀ ಕೃಷ್ಣನಾಗಿ ಹರಿದಾಸ, ಸಾಹಿತಿ ಶ್ರೀ ಮ.ನಾ. ಹೆಬ್ಬಾರ್, ಕುಂತಿಯಾಗಿ ಶ್ರೀ ಕೋಳ್ಯೂರು ರಾಮಚಂದ್ರ ರಾವ್. ಭಾವನಾ ಪ್ರಪಂಚವನ್ನೇ ತೆರೆದರು. ಭಾಗವತರಾಗಿ ಶ್ರೀ ಸತೀಶ ಕೆದ್ಲಾಯ ಹಾರ್‍ಯಾಡಿ, ಮದ್ದಳೆಗಾರರಾಗಿ ಶ್ರೀ ದೇವದಾಸ್ ರಾವ್, ಕೂಡ್ಲಿ, ಚೆಂಡೆ ವಾದಕರಾಗಿ ಶ್ರೀ ಕೃಷ್ಣಮೂರ್ತಿ ಭಟ್ ಉತ್ತಮ ಹಿಮ್ಮೇಳ ನೀಡಿದರು.

ರಾತ್ರಿ ಭೋಜನದ ಬಳಿಕ ಮುಂಜಾನೆಯ ತನಕ ಶ್ರೀ ರಾಮ ವಿಶ್ವಸ್ಥ ಭಜನಾಮಂಡಳಿ, ಹಂಗಾರಕಟ್ಟೆ - ಇವರ ನೇತೃತ್ವದಲ್ಲಿ ಭಜನಾ ಕಾರ್ಯಕ್ರಮ ಜರಗಿತು.

**ವರದಿ : ಬಿ. ನಾಗೇಶ್ ರಾವ್**

# ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬೆಳ್ತಂಗಡಿ

## 2008-2010ನೇ ಸಾಲಿನ ನಿರ್ದೇಶಕರು, ಪದಾಧಿಕಾರಿಗಳ ಆಯ್ಕೆ



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಬೆಳ್ತಂಗಡಿ ಇದರ ಮಹಾಸಭೆಯು ತಾ.24-04-2008 ರಂದು ಸುಬ್ರಹ್ಮಣ್ಯ ಸಭಾಭವನದಲ್ಲಿ ಸಭಾದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯಿತು. 2008-2010ರ ಸಾಲಿನ ನಿರ್ದೇಶಕರುಗಳು ಮತ್ತು ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಸಭಾದ ನೂತನ ಅಧ್ಯಕ್ಷರಾಗಿ ಬಿ.ಎಸ್. ಸುರೇಶ, ಪಂಚವಟಿ, ಕನಕ ದುರ್ಗಾ ಉಜಿರೆ, ಕಾರ್ಯದರ್ಶಿಯಾಗಿ ಬಿ.ಕೆ. ಮೃತ್ಯುಂಜಯ ರಾವ್ ಗೇರುಕಟ್ಟೆ, ಕೋಶಾಧಿಕಾರಿಯಾಗಿ ಪಿ. ಲಕ್ಷ್ಮೀನಾರಾಯಣ ರಾವ್ ಧರ್ಮಸ್ಥಳ, ಉಪಾಧ್ಯಕ್ಷರಾಗಿ ಬಿ.ಕೆ. ಸೀತಾರಾಮ ರಾವ್ ಕಿಲ್ಲೂರು, ಜೊತೆ ಕಾರ್ಯದರ್ಶಿಯಾಗಿ ಶ್ರೀಪತಿರಾವ್ ಕೆ. ಆಯ್ಕೆಯಾದರು. ಬಳಿಕ ನೂತನ ಸಮಿತಿಗಳನ್ನು ನೂತನ ಅಧ್ಯಕ್ಷರ ಸಮ್ಮುಖದಲ್ಲಿ ರಚಿಸಲಾಯಿತು.

ಕಟ್ಟಡ ಸಮಿತಿಯ ಗೌರವಾಧ್ಯಕ್ಷರಾಗಿ ಬಿ.ಪಿ. ಅಶೋಕ್ ಕುಮಾರ್ ಬೆಳ್ತಂಗಡಿ, ಅಧ್ಯಕ್ಷರಾಗಿ ಎಂ. ಎಸ್. ಅರುಣ್ ಕುಮಾರ್ ಉಜಿರೆ, ಕಾರ್ಯದರ್ಶಿಯಾಗಿ ಬಿ.ಕೆ. ಧನಂಜಯರಾವ್ ಬೆಳ್ತಂಗಡಿ ಜೊತೆ ಕಾರ್ಯದರ್ಶಿಯಾಗಿ ಶ್ರೀ ಪಿ. ರಾಧಾಕೃಷ್ಣರಾವ್, ಧರ್ಮಸ್ಥಳ, ಕೋಶಾಧಿಕಾರಿಯಾಗಿ ಶ್ರೀ ಕ್ಯಾದಿಗೆ ಹರೀಶ್‌ರಾವ್, ಧರ್ಮಸ್ಥಳ ಆಯ್ಕೆಯಾದರು.

ಮಹಿಳಾ ವಿಭಾಗದ ಅಧ್ಯಕ್ಷೆಯಾಗಿ ಶ್ರೀಮತಿ ಸ್ವರ್ಣಗೌರಿ ಲಕ್ಷ್ಮೀನಾರಾಯಣರಾವ್, ಕಾರ್ಯದರ್ಶಿಯಾಗಿ ರವಿಜಾ ಸತೀಶ್ ರಾವ್ ಕನ್ಯಾಡಿ, ಕೋಶಾಧಿಕಾರಿಯಾಗಿ ಶ್ರೀಮತಿ ಮಮತಾ ಹರೀಶ್ ಕ್ಯಾದಿಗೆ ಇವರುಗಳನ್ನು ಆರಿಸಲಾಯಿತು.

ಸಲಹೆಗಾರರಾಗಿ ಭಾಸ್ಕರ ಶಾಸ್ತ್ರಿ ದೇಲಂಪಾಡಿತ್ತಾಯರು ಧರ್ಮಸ್ಥಳ, ಚಂದ್ರಶೇಖರರಾವ್ ಕೊಕ್ರಾಡಿ, ಜಯರಾಮರಾವ್ ಬೆಳ್ತಂಗಡಿ, ಶ್ರೀಮತಿ ಶಾಂತಾಸುರೇಶ್ ಉಜಿರೆ ಮತ್ತು ಶ್ರೀಮತಿ ರಾಜೇಶ್ವರಿ ಎಂ. ರಾವ್ ಉಜಿರೆ ಇವರುಗಳನ್ನು ಆರಿಸಲಾಯಿತು.